KAMD310032852015

ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ, ಮದ್ದೂರು
ಉಪಸ್ಥಿತರು :

ಶ್ರೀಮತಿ ನಳಿನ ಎಸ್.ಸಿ., ಬಿ.ಎ ಎಲ್.ಎಲ್.ಬಿ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಮದ್ದೂರು

**ದಿನಾಂಕ: 2 ನೇ ಏಪ್ರಿಲ್ 2026**
**ಅಪರಾಧಿಕ ಪ್ರಕರಣ ಸಂಖ್ಯೆ: 1741/2015**

ಫಿರ್ಯಾದಿದಾರರು - ಕರ್ನಾಟಕ ರಾಜ್ಯದ ಪರವಾಗಿ
ರೈಲ್ವೆ ಪೊಲೀಸ್ ಠಾಣೆ, ಮೈಸೂರು.
(ಸರ್ಕಾರದ ಪರವಾಗಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)

ವಿರುದ್ಧ

ಆರೋಪಿತರು

1. ಮಹಮದ್ ದಾದಪಿರ್ ಬಿನ್ ಮಹಮದ್ ಉಸ್ಮಾನ್,
33 ವರ್ಷ, ನಂ: 5-6-99/588,
ಮಾಡೆಲ್ ಕಾಲೋನಿ-1 ಹಿಂದೂಪುರ.

2. ದಾರಪ್ಪ, ಲೇ. ಶಿವಪ್ಪ, 40 ವರ್ಷ,
ಮನೆ.ನಂ. 48, ಬಂಡೇಮಠ ಲೇಔಟ್,
ಕೆಂಗೇರಿ ಉಪನಗರ, ಬೆಂಗಳೂರು

3. ಪಿ. ವಿಲ್ಸನ್ ಬಿನ್ ಪರಮಾನಂದ,
30 ವರ್ಷ ನಂ. 169/ಇ, ನ್ಯೂ ರೈಲ್ವೆ ಕ್ವಾಟ್ರಸ್,
ವಸಂತನಗರ, ಬೆಂಗಳೂರು
(ಪ್ರತ್ಯೇಕ ಪ್ರಕರಣ ದಾಖಲಿಸಲಾಗಿದೆ)

4. ಆರ್.ಮಹದೇವಸ್ವಾಮಿ ಬಿನ್ ಲೇ. ರಂಗಯ್ಯ,
ರೈಲ್ವೆ ವಸತಿ ಗೃಹ ಸಂ. 69/ಹೆಚ್,
ರೈಲ್ವೆ ಕಾಲೋನಿ ಯಶವಂತಪುರ, ಬೆಂಗಳೂರು

(ಆರೋಪ-1 ರವರಿಗೆ ಶ್ರೀ.ಹೆಚ್.ವಿ.ಬಿ., ವಕೀಲರು)

(ಆರೋಪ-2 ರವರಿಗೆ ಶ್ರೀ.ಹೆಚ್.ಎಸ್.ಬಿ., ವಕೀಲರು)
(ಆರೋಪ-4 ರವರಿಗೆ ಶ್ರೀ.ಕೆ.ಬಿ.ಎಂ., ವಕೀಲರು)

| | | |
|---|---|---|
| ಅಪರಾಧ ನಡೆದ ದಿನಾಂಕ | : | 14.02.2015 |
| ಪ್ರಕರಣ ದಾಖಲು ಮಾಡಿದ ದಿನಾಂಕ | : | 27.02.2015 |
| ದೂರುದಾರರ ಹೆಸರು | : | ಸೋಮಶೇಖರ. |
| ಸಾಕ್ಷಿದಾರರ ವಿಚಾರಣೆಗೆ ಪ್ರಾರಂಭಿಸಿದ ದಿನಾಂಕ | : | 03.01.2024 |
| ಸಾಕ್ಷಿದಾರರ ವಿಚಾರಣೆ ಮುಕ್ತಾಯದ ದಿನಾಂಕ | : | 17.02.2026 |
| ಅಪರಾಧದ ಕಲಂಗಳು | : | ಭಾರತೀಯ ದಂಡ ಸಂಹಿತೆ ಕಲಂ.420, 468, 471 ಮತ್ತು 465 ಸಹವಾಚಕ 34 ರಂತೆ |
| ತೀರ್ಪಿನ ದಿನಾಂಕ | : | 02.04.2026 |
| ತೀರ್ಪು | ಆರೋಪಿತರನ್ನು ನಿರ್ದೋಷಿಗಳೆಂದು ಪರಿಗಣಿಸಿ ಆದೇಶ ಮಾಡಲಾಗಿದೆ. | |

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
**ಜೆ.ಎಂ.ಎಫ್.ಸಿ., ಮದ್ದೂರು.**

## ತೀರ್ಪು

ಮೈಸೂರು ರೈಲ್ವೆ ಪೊಲೀಸರು ಆರೋಪಿ-1, 2 ಮತ್ತು 4 ರವರ ವಿರುದ್ಧ ಭಾರತ ದಂತ ಸಂಹಿತೆ ಕಲಂ.420, 468, 471 ಮತ್ತು 465 ಸಹವಾಚಕ 34 ರಡಿಯಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದಾರೆ.

2. ಅಭಿಯೋಜನೆಯ ಪ್ರಕರಣದ ಸಾರಾಂಶವೇನೆಂದರೆಃ

ದಿನಾಂಕಃ14-02-2015 ರಂದು ಚಾಸಾ-2 ರವರು ಮದ್ದೂರು ರೈಲು ನಿಲ್ದಾಣದಲ್ಲಿ ಸ್ಟೇಷನ್‌ಮಾಸ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಆರೋಪಿ-1 ರವರು ಅವರ ಬಳಿ ಹಾಜರಾಗಿ ಅಸಿಸ್ಟೆಂಟ್ ಪರ್ಸನಲ್ ಆಫೀಸರ್, ಬೆಂಗಳೂರು ವಿಭಾಗ, ನೈರುತ್ಯ ರೈಲ್ವೆ ರವರ ಹೆಸರಿನಲ್ಲಿ ನೀಡಿರುವುದೆಂದು ಎಸ್.ಟಿ.ಪಿ/ಮದ್ದೂರು 'ಡಿ' ಗ್ರೂಪ್ ಹುದ್ದೆಯ ನಕಲಿ ನೇಮಕಾತಿ ಆದೇಶ

ಪತ್ರವನ್ನು ಹಾಜರುಪಡಿಸಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದು, ಚಾಸಾ-2 ರವರು ಆರೋಪಿ-1 ಆರೋಪಿತನಿಗೆ ದಿನಾಂಕಃ16-02-2015 ರಂದು ಬುನಾದಿ ತರಬೇತಿಗಾಗಿ ಪ್ರಿನ್ಸಿಪಲ್/ಎಂಡಿಆರ್‌ಟಿಐ/ಅಶೋಕಪುರಂ ರವರ ಬಳಿ ವರದಿ ಮಾಡಿಕೊಳ್ಳುವಂತೆ ಜ್ಞಾಪನ ಪತ್ರ ನೀಡಿದ್ದು, ಆರೋಪಿ-1 ರವರು ಬುನಾದಿ ತರಭೇತಿಗೆ ವರದಿ ಮಾಡಿಕೊಳ್ಳದೆ ಇದ್ದುದರಿಂದ ಚಾಸಾ-2 ರವರು ದಿನಾಂಕಃ18-02-2015 ರಂದು ಈ ವಿಷಯವನ್ನು ಚಾಸಾ-1 ರವರಿಗೆ ತಿಳಿಸಲಾಗಿ ಸದರಿ ಉದ್ಯೋಗ ನೇಮಕಾತಿ ಪತ್ರವು ನಕಲಿಯಾಗಿರುತ್ತದೆ ಯಾರಿಗೂ ಉದ್ಯೋಗ ನೇಮಕಾತಿ ಪತ್ರವನ್ನು ನೀಡಿರುವುದಿಲ್ಲ ಎಂದು ತಿಳಿಸಿದ್ದು, ಆರೋಪಿ-1 ರವರು ಅಸಿಸ್ಟೆಂಟ್ ಪರ್ಸನಲ್ ಆಫೀಸರ್, ಬೆಂಗಳೂರು ವಿಭಾಗ, ನೈರುತ್ಯ ರೈಲ್ವೆ ರವರ ಹೆಸರಿನಲ್ಲಿ ನೀಡಿದ್ದ ಎಸ್.ಟಿ.ಪಿ/ಮದ್ದೂರು 'ಡಿ' ಗ್ರೂಪ್ ಹುದ್ದೆಯ ನಕಲಿ ನೇಮಕಾತಿ ಆದೇಶ ಪತ್ರವನ್ನು ಅಸಲಿ ನೇಮಕಾತಿ ಪತ್ರವೆಂದು ಹಾಜರುಪಡಿಸಿ ಕರ್ತವ್ಯಕ್ಕೆ ವರದಿ ಮಾಡಿಕೊಂಡು ರೈಲ್ವೆ ಇಲಾಖೆಗೆ ವಂಚಿಸಿರುವುದಾಗಿ ಬೆಸಗರಹಳ್ಳಿ ಠಾಣಾ ಪೋಲೀಸರು ಆರೋಪಿತರ ವಿರುದ್ಧ ಭಾರತ ದಂತ ಸಂಹಿತೆ ಕಲಂ.420, 468, 471 ಮತ್ತು 465 ಸಹವಾಚಕ 34 ರಡಿಯಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದಾರೆ.

3. ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿದ ನಂತರ ಪೋಲೀಸರು ಸಲ್ಲಿಸಿದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಆರೋಪಿತರ ರವರ ವಿರುದ್ಧ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದ ನಂತರ ಭಾ.ದಂ.ಸಂ.ಕಲಂ 207 ರಡಿಯಲ್ಲಿ ನೀಡಲಾದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪೋಲೀಸರು ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲೆಗಳನ್ನು ಉಚಿತವಾಗಿ ನೀಡಿ ದೋಷಾರೋಪಣೆಯನ್ನು ರಚಿಸಿ ಆರೋಪಿತರಿಗೆ ಓದಿ ಹೇಳಲಾಗಿ ಆರೋಪಿತರು ವಿಚಾರಣೆಯಾಗಬೇಕು ಎಂದು ತಿಳಿಸಿರುತ್ತಾರೆ.

4. ಅಭಿಯೋಜನೆಯ ಆರೋಪಿತರ ರವರ ವಿರುದ್ಧದ ಅಪರಾಧವನ್ನು ಸಾಭೀತುಪಡಿಸಲು 11 ಜನ ಸಾಕ್ಷಿದಾರರನ್ನು ವಿಚಾರಣೆ ಮಾಡಿ 9 ದಾಖಲಾತಿಗಳನ್ನು ನಿಶಾನೆಯನ್ನಾಗಿ ಗುರುತಿಸಿಕೊಂಡಿದ್ದಾರೆ. ಅಭಿಯೋಗದ ಪರ ವಿಚಾರಣೆಯಾದ ಸಾಕ್ಷಿಗಳ ವಿಚಾರಣೆಯಲ್ಲಿ ಆರೋಪಿತರ ವಿರುದ್ಧ ಸಾಕ್ಷ್ಯವು ಕಂಡುಬಂದಿದ್ದರಿಂದ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರಡಿಯಲ್ಲಿನ ಆರೋಪಿತರ ಹೇಳಿಕೆಯನ್ನು ದಾಖಲು ಮಾಡಿಕೊಳ್ಳಲಾಯಿತು.

5. ಉಭಯ ಪಕ್ಷಕಾರರ ಪರ ವಾದ ವಿವಾದವನ್ನು ಆಲಿಸಲಾಯಿತು.

6. ಕಡತದ ಮೇಲೆ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿದ ನಂತರ ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿದವು ಃ

<u>ಅಂಶ ಸಂಖ್ಯೆ-**1**ಃ</u> ದಿನಾಂಕ 14.02.2015 ರಂದು ಚಾಸಾ-2 ರವರು ಮದ್ದೂರು ರೈಲ್ವೆ ನಿಲ್ದಾಣದಲ್ಲಿ ಸ್ಟೇಷನ್ ಮಾಸ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಆರೋಪಿತರಾದ ನೀವೆಲ್ಲರೂ ಸಮಾನ ಉದ್ದೇಶವನ್ನೊಂದಿದ್ದು, 1 ನೇ ಆರೋಪಿಯಾದ ನೀನು ಚಾಸಾ-2 ರವರ ಮುಂದೆ ಹಾಜರಾಗಿ ಅಸಿಸ್ಟೆಂಟ್ ಪರ್ಸನಲ್ ಆಫೀಸರ್, ಬೆಂಗಳೂರು ವಿಭಾಗ ನೈರುತ್ಯ ರೈಲ್ವೆ ರವರ ಹೆಸರಿನಲ್ಲಿ ನೀಡಿರುವುದೆಂದು ಎಸ್.ಟಿ.ಪಿ/ಮದ್ದೂರು ಡಿ ಗ್ರೂಪ್ ಹುದ್ದೆಯ ನಕಲಿ ನೇಮಕಾತಿ ಅದೇಶದ ಪತ್ರವನ್ನು ಹಾಜರುಪಡಿಸಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದು ನಂತರ ಚಾಸಾ-2 ರವರು ತರಬೇತಿಗಾಗಿ ನಿಮ್ಮನ್ನು ದಿ. 18.02.2019 ರಂದು ಪ್ರಿನಿಪಾಲ್/ಎಂಡಿಆರ್ ಟಿಐ/ಆಶೋಕಪುರಂ ಗೆ ಕಳುಹಿಸಿಕೊಟ್ಟಿದ್ದು 1 ನೇ ಆರೋಪಿಯಾದ ನೀವು ಅಲ್ಲಿಗೆ ಹೋಗದೆ ಇದ್ದು ಚಾಸಾ-2 ರವರು ಈ ವಿಚಾರವನ್ನು ಚಾಸಾ-1 ರವರಿಗೆ ತಿಳಿಸಿದ್ದು ಆಗ 1 ನೇ ಆರೋಪಿಯು ತಂದ ನೇಮಕಾತಿ ಪತ್ರ ನಕಲಿ ಎಂದು ಗೊತ್ತಾಗಿದ್ದು, 2 ರಿಂದ 4 ನೇ ಆರೋಪಿತರಾದ ನೀವುಗಳು ನಕಲಿ ಆದೇಶ ಪತ್ರವನ್ನು ಅಸಲಿ ಎಂದು 1 ನೇ ಆರೋಪಿಗೆ ನೀಡಿ ಇಲಾಖೆಗೆ ವಂಚಿಸಿದ್ದು ಈ ಮೂಲಕ ನೀವು ಭಾರತ ದಂತ ಸಂಹಿತೆಯ ಕಲಂ 420 ರ ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತಾರೆಯೇ?

<u>ಅಂಶ ಸಂಖ್ಯೆ-**2**</u> ಆರೋಪಿತರೆಲ್ಲರೂ ಸಮಾನ ಉದ್ದೇಶವನ್ನು ಹೊಂದಿದ್ದು, 2 ನೇ ಆರೋಪಿಯು 1 ನೇ ಆರೋಪಿಯ ಬಳಿ ರೈಲ್ವೆ ಇಲಾಖೆಯಲ್ಲಿ ಕೆಲಸ ಕೊಡಿಸುವಂತೆ ಹೇಳಿ ಆರೋಪಿ-1 ರವರಿಂದ 5 ಲಕ್ಷಗಳನ್ನು ಪಡೆದುಕೊಂಡಿದು, 2 ರಿಂದ 4 ನೇ ಆರೋಪಿತರಾದ ನೀವು ನಕಲೀ ನೇಮಕಾತಿ ಆದೇಶ ಪತ್ರವನ್ನು ಸೃಷ್ಟಿ ಮಾಡಿ, ಆರೋಪಿ-1 ರವರಿಗೆ ನೀಡಿದ್ದು, ಆ ಮೂಲಕ ಭಾರತದ

ದಂಡ ಸಂಹಿತೆ ಕಲಂ.468 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತಾರೆಯೇ?

<u>ಅಂಶ ಸಂಖ್ಯೆ-**3**</u> ಆರೋಪಿತರೆಲ್ಲರೂ ಸಮಾನ ಉದ್ದೇಶದಿಂದ ಸುಳ್ಳಾಗಿ ದೃಷ್ಟಿಸಿಕೊಂಡ ದಾಖಲೆಗಳನ್ನು ನೈಜವಾದವೆಂದು ಉಪಯೋಗಿಸಿಕೊಂಡಿದ್ದು, ಆ ಮೂಲಕ ಭಾರತದ ದಂಡ ಸಂಹಿತೆ ಕಲಂ.471 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತಾರೆಯೇ?

<u>ಅಂಶ ಸಂಖ್ಯೆ-**4**</u> ಆರೋಪಿತರೆಲ್ಲರೂ ಸಮಾನ ಉದ್ದೇಶದಿಂದ 2 ರಿಂದ 4 ನೇ ಆರೋಪಿತರಾದ ನೀವು ನಕಲೀ ನೇಮಕಾತಿ ಆದೇಶ ಪತ್ರವನ್ನು ಸೃಷ್ಟಿ ಮಾಡಿ, ಪ್ರಾಧಿಕಾರವು ಆರೋಪಿ-1 ರವರನ್ನು ನೇಮಕ ಮಾಡಿದೆ ಎಂಬ ಹೇಳಿಕಯನ್ನು ಬೆಂಬಲಿಸಿದ್ದು, ಆ ಮೂಲಕ ಭಾರತದ ದಂಡ ಸಂಹಿತೆ ಕಲಂ.465 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತಾರೆಯೇ?

<u>ಅಂಶ-**5**</u> ಏನು ಆದೇಶ?

7. ಈ ಮೇಲಿನ ಅಂಶಗಳಿಗೆ ನ್ಯಯಾಲಯದ ಉತ್ತರ ಈ ಕೆಳಕಂಡಂತಿವೆಃ

ಅಂಶ ಸಂಖ್ಯೆ- 1 - ನಕಾರಾತ್ಮಕವಾಗಿ,

ಅಂಶ ಸಂಖ್ಯೆ- 2 – ನಕಾರಾತ್ಮಕವಾಗಿ,

ಅಂಶ ಸಂಖ್ಯೆ- 3 – ನಕಾರಾತ್ಮಕವಾಗಿ,

ಅಂಶ ಸಂಖ್ಯೆ- 4 - ನಕಾರಾತ್ಮಕವಾಗಿ,

ಅಂಶ ಸಂಖ್ಯೆ-5 - ಅಂತಿಮ ಆದೇಶದಂತೆ,

ಈ ಕೆಳಕಂಡ ಕಾರಣಗಳಿಗಾಗಿ ಃ

## ಕಾರಣಗಳು

8. <u>ಅಂಶ ಸಂಖ್ಯೆ-**1** ರಿಂದ **4-**</u> ಈ ಅಂಶಗಳು ಒಂದಕ್ಕೊಂದು ಆಂತರಿಕವಾಗಿ ಸಂಬಂಧವನ್ನು ಹೊಂದಿರುವುದರಿಂದ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಅವುಗಳನ್ನು ಒಟ್ಟಾಗಿ ಚರ್ಚಿಸಲು ತೆಗೆದಕೊಳ್ಳಲಾಗಿದೆ.

9. ದಿನಾಂಕ:14-02-2015 ರಂದು ಚಾಸಾ-2 ರವರು ಮದ್ದೂರು ರೈಲು ನಿಲ್ದಾಣದಲ್ಲಿ ಸ್ಟೇಷನ್‌ಮಾಸ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಆರೋಪಿ-1 ರವರು ಅವರ ಬಳಿ ಹಾಜರಾಗಿ ಅಸಿಸ್ಟೆಂಟ್ ಪರ್ಸನಲ್ ಆಫೀಸರ್, ಬೆಂಗಳೂರು ವಿಭಾಗ, ನೈರುತ್ಯ ರೈಲ್ವೆ ರವರ ಹೆಸರಿನಲ್ಲಿ ನೀಡಿರುವುದೆಂದು ಎಸ್.ಟಿ.ಪಿ/ಮದ್ದೂರು 'ಡಿ' ಗ್ರೂಪ್ ಹುದ್ದೆಯ ನಕಲಿ ನೇಮಕಾತಿ ಆದೇಶ ಪತ್ರವನ್ನು ಹಾಜರುಪಡಿಸಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದು, ಚಾಸಾ-2 ರವರು ಆರೋಪಿ-1 ಆರೋಪಿತನಿಗೆ ದಿನಾಂಕ:16-02-2015 ರಂದು ಬುನಾದಿ ತರಬೇತಿಗಾಗಿ ಪ್ರಿನ್ಸಿಪಲ್/ಎಂಡಿಆರ್‌ಟಿಐ/ಅಶೋಕಪುರಂ ರವರ ಬಳಿ ವರದಿ ಮಾಡಿಕೊಳ್ಳುವಂತೆ ಜ್ಞಾಪನ ಪತ್ರ ನೀಡಿದ್ದು, ಆರೋಪಿ-1 ರವರು ಬುನಾದಿ ತರಭೇತಿಗೆ ವರದಿ ಮಾಡಿಕೊಳ್ಳದೆ ಇದ್ದುದರಿಂದ ಚಾಸಾ-2 ರವರು ದಿನಾಂಕ:18-02-2015 ರಂದು ಈ ವಿಷಯವನ್ನು ಚಾಸಾ-1 ರವರಿಗೆ ತಿಳಿಸಲಾಗಿ ಸದರಿ ಉದ್ಯೋಗ ನೇಮಕಾತಿ ಪತ್ರವು ನಕಲಿಯಾಗಿರುತ್ತದೆ ಯಾರಿಗೂ ಉದ್ಯೋಗ ನೇಮಕಾತಿ ಪತ್ರವನ್ನು ನೀಡಿರುವುದಿಲ್ಲ ಎಂದು ತಿಳಿಸಿದ್ದು, ಆರೋಪಿ-1 ರವರು ಅಸಿಸ್ಟೆಂಟ್ ಪರ್ಸನಲ್ ಆಫೀಸರ್, ಬೆಂಗಳೂರು ವಿಭಾಗ, ನೈರುತ್ಯ ರೈಲ್ವೆ ರವರ ಹೆಸರಿನಲ್ಲಿ ನೀಡಿದ್ದ ಎಸ್.ಟಿ.ಪಿ/ಮದ್ದೂರು 'ಡಿ' ಗ್ರೂಪ್ ಹುದ್ದೆಯ ನಕಲಿ ನೇಮಕಾತಿ ಆದೇಶ ಪತ್ರವನ್ನು ಅಸಲಿ ನೇಮಕಾತಿ ಪತ್ರವೆಂದು ಹಾಜರುಪಡಿಸಿ ಕರ್ತವ್ಯಕ್ಕೆ ವರದಿ ಮಾಡಿಕೊಂಡು ರೈಲ್ವೆ ಇಲಾಖೆಗೆ ವಂಚಿಸಿರುವುದಾಗಿ ಬೆಸಗರಹಳ್ಳಿ ಠಾಣಾ ಪೋಲೀಸರು ಆರೋಪಿತರ ವಿರುದ್ಧ ಭಾರತ ದಂಡ ಸಂಹಿತೆ ಕಲಂ.420, 468, 471 ಮತ್ತು 465 ಸಹವಾಚಕ 34 ರಡಿಯಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದಾರೆ.

10. ಚಾಸಾ-1/ಪ್ರಾಸಾ-1 ಸೋಮಶೇಖರ ಸೀನಿಯರ್ ಪರ್ಸನಲ್ ಆಫೀಸರ್ ರವರು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕ:14.02.2015 ರಂದು ತಾನು Assistant personnel officer ಆಗಿ ಕೆಲಸ ಮಾಡುತ್ತಿದ್ದಾಗ, ತನಗೆ ಮದ್ದೂರು station master ರವರಿಂದ 1 ನೇ

ಆರೋಪಿಯು points men ಆಗಿ ಕರ್ತವ್ಯಕ್ಕೆ ಹಾಜರಾಗಿರುವ ಬಗ್ಗೆ ಮಾಹಿತಿ ಬಂದಿರುತ್ತದೆ ಎಂದು, ಆದರೆ ತಾವು ಇಂತಹ ಯಾವುದೇ ನೇಮಕಾತಿ ಮಾಡದ ಕಾರಣ ಅವರ appointment letter ನ್ನು ಕಳುಹಿಸಿಕೊಡಲು station master ಗೆ ತಿಳಿಸಿರುತ್ತೇನೆ ಎಂದು, ಅದರಂತೆ ಸದರಿ station master ರವರು ತನಗೆ ನೇಮಕಾತಿ ಆದೇಶದ ನಕಲನ್ನು ಕಳುಹಿಸಿಕೊಟ್ಟಿದ್ದು, ಅದರಲ್ಲಿ ಸುಮಾರು 8 ಹೆಸರುಗಳು ಇದ್ದು, 1 ನೇ ಆರೋಪಿಯ ಹೆಸರು ಇರುತ್ತದೆ ಎಂದು, ಸದರಿ ನೇಮಕಾತಿ ಆದೇಶವು ತಮ್ಮ ಇಲಾಖೆಯಿಂದ ಹೊರಡಿಸಿರುವುದಿಲ್ಲ ಮತ್ತು ತಮ್ಮ ಇಲಾಖೆಯಲ್ಲಿ ಜಿಎಂ ಕೋಟಾ ಸಹ ಇರುವುದಿಲ್ಲ ಎಂದು, ಸದರಿ ನೇಮಕಾತಿ ಆದೇಶವನ್ನು ಯಾರೋ ಸೃಷ್ಟಿಮಾಡಿಕೊಂಡಿರುತ್ತಾರೆ ಹಾಗೂ ಆದೇಶದಲ್ಲಿರುವ ಸಹಿ ತನ್ನ ಸಹಿಯಾಗಿರುವುದಿಲ್ಲ ಎಂದು, ಈ ಬಗ್ಗೆ ತಾನು ರೈಲ್ವೇ ಪೊಲೀಸರ ಬಳಿ ತಾನು ಮತ್ತು ಚಾಸಾ-2 ರವರು ಜೊತೆಯಲ್ಲಿ ದೂರನ್ನು ದಾಖಲಿಸಿರುತ್ತೇನೆ ಎಂದು, ಸಾಮಾನ್ಯವಾಗಿ ತಮ್ಮ ಇಲಾಖೆಯಲ್ಲಿ Railway Recruitment commission ಇರುತ್ತದೆ ಎಂದು, ಸದರಿ commission ನಿಂದಲೇ ಹುದ್ದೆಗಳನ್ನು ಭರ್ತಿ ಮಾಡುತ್ತಾರೆಂದು, ಅಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ಹುಬ್ಬಳ್ಳಿಯಲ್ಲಿರುವ ತಮ್ಮ Head quarters ಗೆ ಕಳುಹಿಸಿರುತ್ತಾರೆ ಎಂದು, Head quarters ನಿಂದ ಸಂಬಂಧಪಟ್ಟ ವಿಭಾಗಗಳಿಗೆ ಕಳುಹಿಸುತ್ತಾರೆಂದು, ತಮ್ಮಲ್ಲಿ 3 ವಿಭಾಗಗಳಿದ್ದು, ಅವುಗಳೆಂದರೆ ಹುಬ್ಬಳ್ಳಿ, ಮೈಸೂರು ಮತ್ತು ಬೆಂಗಳೂರು ವಿಭಾಗಗಳು ಆಗಿರುತ್ತವೆ ಎಂದು ತಮ್ಮ ಸಾಕ್ಷ್ಯ ನುಡಿದಿರುತ್ತಾರೆ.

11. ಚಾಸಾ-2/ಪ್ರಾಸಾ-2 ಬಾಬು, ಮದ್ದೂರು ರೈಲ್ವೆ ಸ್ಟೇಷನ್ ಮಾಸ್ಟರ್ ರವರು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕಃ14.02.2015 ರಂದು ಒಬ್ಬ ವ್ಯಕ್ತಿ ಸುಮಾರು 3.00 ಗಂಟೆ ಸಮಯದಲ್ಲಿ ತನ್ನ ಬಳಿ ನೇಮಕಾತಿ ಆದೇಶ ತಂದು ಹಾಜರು ಪಡಿಸಿರುತ್ತಾರೆ ಎಂದು, ಸದರಿ ದಿನ ತಾನು ಬೆಳಿಗ್ಗೆ 11.00 ರಿಂದ ರಾತ್ರಿ 9.00 ಗಂಟೆಯವರೆಗೂ ಕರ್ತವ್ಯ ನಿರ್ವಹಿಸಿರುತ್ತೇನೆ ಎಂದು, ಸದರಿ ನೇಮಕಾತಿ ಆದೇಶದ ವಿಚಾರವನ್ನು incharge station master ಮಣಿಯಯ್ಯ ರವರಿಗೆ ತಿಳಿಸಿದ್ದು, ಸದರಿಯವರು ಹಾಜರಾದ ವ್ಯಕ್ತಿಯ ಹೆಸರನ್ನು ನಮೂದಿಸಿಕೊಂಡು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಅವಕಾಶ ಮಾಡಿಕೊಡಲು ತಿಳಿಸಿದ ಮೇರೆಗೆ ತಾನು ಸದರಿ ವ್ಯಕ್ತಿಯಾದ ಮಹಮದ್ ದಾದಪೀರ್ ಬಿನ್ ಮಹಮದ್ ಉಸ್ಮಾನ್ ರವರನ್ನು ಕರ್ತವ್ಯಕ್ಕೆ ವರದಿ ಮಾಡಿಸಿಕೊಂಡು ಅವರನ್ನು ತರಭೇತಿಗೆ ಕಳುಹಿಸಲು ಮೆಮೋ ನೀಡಿರುತ್ತಾರೆ ಎಂದು,

ಮಾರನೇ ದಿನ ಭಾನುವಾರವಾದ ಕಾರಣ ಸೋಮವಾರ ಮೈಸೂರಿನ ತರಭೇತಿ ಕೇಂದ್ರಕ್ಕೆ ಹೋಗಿ ವರದಿ ಮಾಡಿಕೊಳ್ಳಲು ಸೂಚಿಸಿ ಕಳುಹಿಸಿರುತ್ತೇನೆ ಎಂದು, ಆಗ 1 ನೇ ಆರೋಪಿಯು ಸೋಮವಾರ ತನಗೆ ವೈಯಕ್ತಿಕ ಕೆಲಸವಿರುವ ಕಾರಣ ಮಂಗಳವಾರ ತರಭೇತಿಗೆ ವರದಿ ಮಾಡಿಕೊಳ್ಳುತ್ತೇನೆಂದು ಹೇಳಿ ಹೊರಟು ಹೋಗಿರುತ್ತಾರೆ ಎಂದು, 2-3 ದಿನಗಳ ನಂತರ incharge station master ಮಣಿಯಯ್ಯ ರವರು ಮೂಲತಃ ಮೈಸೂರಿನವರಾಗಿದ್ದ ಕಾರಣ ಅವರು ತರಭೇತಿ ಕೇಂದ್ರದಲ್ಲಿ 1 ನೇ ಆರೋಪಿ ವರದಿ ಮಾಡಿಕೊಂಡಿರುವ ಬಗ್ಗೆ ವಿಚಾರಿಸಿದಾಗ ಅಂತಹ ಹೆಸರಿನ ಯಾವುದೇ ವ್ಯಕ್ತಿ ತರಭೇತಿಗೆ ಹಾಜರಾಗಿರುವುದಿಲ್ಲವೆಂದು ಅವರಿಗೆ ಮಾಹಿತಿ ಬಂದಿದ್ದು ತನಗೆ ತಿಳಿಸಿರುತ್ತಾರೆ ಎಂದು, ಈ ಬಗ್ಗೆ South Western Railway personnel office ಹಾಗೂ Traffic department ನಲ್ಲಿ ವಿಚಾರಿಸಿದಾಗ ಅಂತಹ ಯಾವುದೇ ನೇಮಕಾತಿ ಆದೇಶ ಆಗಿರುವುದಿಲ್ಲವೆಂದು ಅವರು ತಿಳಿಸಿದ್ದು, ಸದರಿ ಆದೇಶ ನಕಲಿ ಆದೇಶ ಎಂದು ತಮಗೆ ತಿಳಿದು ಬಂದ ಕಾರಣ ಮೇಲಾಧಿಕಾರಿಗಳ ಆದೇಶದಂತೆ ತಾನು ಮತ್ತು ಚಾಸಾ-1 ರವರು ರೈಲ್ವೇ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತಾರೆ ಎಂದು ತಮ್ಮ ಸಾಕ್ಷ್ಯನುಡಿದಿರುತ್ತಾರೆ.

12. ಚಾಸಾ-3/ಫ್ರಾಸಾ-3 ಅರ್ಚನಾ ಪ್ರಸಾದ್., ಚೀಫ್ ಆಫೀಸರ್., ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ, ಸುಮಾರು 10 ವರ್ಷದ ಹಿಂದೆ ತಾನು ಜೂನಿಯರ್ ಕರ್ಕ್ ಆಗಿ ಕೆಲಸ ಮಾಡುತ್ತಿದ್ದು, ತನ್ನ ಕೆಲಸವೂ ನೇಮಕಾತಿ, ವರ್ಗಾವಣೆ, ಪದನ್ನೋತಿ ಇತ್ಯಾಧಿ ಕೆಲಸಗಳ ಪ್ರೊಸೆಸ್ ಗಳನ್ನು ನಿರ್ವಹಿಸುವುದಾಗಿರುತ್ತದೆ ಎಂದು, ಬೆಂಗಳೂರಿನ ಟ್ರಾಫಿಕ್ ಇನ್ಸ್ ಪೆಕ್ಟರ್ ಆಫ್ ರೈಲ್ವೇ ರವರು ತನಗೆ ಮದ್ದೂರಿನಲ್ಲಿ ದಾದಾ ಫೀರ್ ಎಂಬುವವರು ಕೆಲಸಕ್ಕೆ ನೇಮಕಾತಿ ಹೊಂದಿದ್ದು ನಿಮಗೆ ತಿಳಿದಿದೆಯೇ ಎಂದು ವಿಚಾರ ತಿಳಿಸಿದ್ದು ಸದರಿ ವಿಚಾರ ತನಗೆ ಗೊತ್ತಿಲ್ಲ ಎಂದು ಹೇಳಿದ್ದು, ಸದರಿಯವರು ಗ್ರೂಪ್-ಡಿ ನ ಟ್ರಾಫಿಕ್ ಪ್ಲೋಟರ್ ಆಗಿ ನೇಮಕಗೊಂಡಿದ್ದಾರೆಂದು ಹೇಳಿದ್ದು, ಸದರಿ ವಿಚಾರವನ್ನು ತಮ್ಮ ಆಫೀಸರಾದ ಚಾಸಾ-1 ರವರಿಗೂ ತಿಳಿಸಿದ್ದು, ಸಾಮಾನ್ಯವಾಗಿ ನೇಮಕಾತಿ ಆದೇಶವಾಗಿದ್ದಲ್ಲಿ ತಮ್ಮ ಮೇಲಾಧಿಕಾರಿಯಿಂದ ಪತ್ರ ಬರುತ್ತದೆ ಅದನ್ನು approval ಪಡೆದು candidate offer letter ಕಳುಹಿಸುತ್ತೇವೆ ಎಂದು, ಸದರಿಯವರು ತಮ್ಮ ಮುಂದೆ ಹಾಜರಾದಾಗ ದಾಖಲಾತಿಗಳನ್ನು ಪರಿಶೀಲನೆ ಮಾಡಿ, ಟಿ.ಐ. ಹೆಡ್ ಕ್ವಾರ್ಟರ್ಸ್ ಗೆ ನೇಮಕಾತಿ ಮಾಡಿಕೊಳ್ಳಲು ಕಳುಹಿಸುತ್ತೇವೆ ಎಂದು, ಅಲ್ಲಿರುವ

ಸೀನಿಯರ್ ಡಿವಿಷನಲ್ ಆಪರೇಷನ್ ಮ್ಯಾನೇಜರ್ ರವರು ಎಲ್ಲಿ ಖಾಲಿಯಿರುತ್ತದೋ ಆ ಸ್ಥಳಕ್ಕೆ ನೇಮಕ ಮಾಡಿ ಕಳುಹಿಸುತ್ತಾರೆ ಎಂದು ತಮ್ಮ ಸಾಕ್ಷ್ಯ ನುಡಿದಿರುತ್ತಾರೆ.

13. ಪ್ರಾಸಾ-3 ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ಸದರಿ ನೇಮಕವಾದ ಪೋಸ್ಟಿಂಗ್ ಆರ್ಡರ್ ನ್ನು ನಮಗೆ ಕಳುಹಿಸಿದ ಮೇರೆಗೆ ನಾವು appointment order ನ್ನು ನೀಡುತ್ತೇವೆ ಎಂದು, appointment order ನೀಡಿದ ನಂತರ ಸದರಿ ಕಾಪಿ ಯನ್ನು ಸ್ಟೇಷನ್ ಮತ್ತು operator branch ಗೆ ಕಳುಹಿಸುತ್ತೇವೆ ಎಂದು, ತಮಗೆ ಮತ್ತು ಸದರಿಯವರಿಗೆ ಯಾವ ವ್ಯಕ್ತಿ ನೇಮಕಾತಿಯಾಗಿದ್ದಾನೆಂಬುದು ಗೊತ್ತಿರುತ್ತದೆ ಎಂದು, appointment order ನಲ್ಲಿ ಸದರಿ ನೇಮಕಾತಿಗೊಳ್ಳುವ ವ್ಯಕ್ತಿಯ ವಿವರ ಮತ್ತು ನೇಮಕಾತಿ ಷರತ್ತುಗಳು ಇರುತ್ತವೆ ಎಂದು, ಅದರಂತೆ ಆರೋಪಿ ನೇಮಕಾತಿ ಹೊಂದಿದ್ದಾರೆಂದು ತಮಗೆ ಹೇಳಿದಾಗ, ತಾನು ನೇಮಕಾತಿ ಹೊಂದಿದ್ದ ಬಗ್ಗೆ ತಮ್ಮಲ್ಲಿ ಯಾವುದೇ ಇಲ್ಲ ಎಂಬ ವಿಚಾರವನ್ನು ಚಾಸಾ-1 ರವರಿಗೆ ಹೇಳಿರುತ್ತೇನೆ ಎಂದು, ಅದರಂತೆ ಪೊಲೀಸ್ ಠಾಣೆಯಿಂದ 2015 ರ ಅವಧಿಯಲ್ಲಿ ಠಾಣೆಗೆ ಕರೆದಿದ್ದು, ಸದರಿ ವೇಳೆಯಲ್ಲಿ ಪೊಲೀಸರು ವಿವಾದಿತ ನೇಮಕಾತಿ ಪತ್ರವನ್ನು ತನಗೆ ತೋರಿಸಿ ವಿತರಿಸುವ ನೇಮಕಾತಿ ಪತ್ರ ಮತ್ತು ವಿವಾದಿತ ನೇಮಕಾತಿ ಪತ್ರದ ನಡುವೆ ವ್ಯತ್ಯಾಸ ಏನಿದೆ ಎಂದು ಗುರುತಿಸುವಂತೆ ಹೇಳಿದ್ದು, ಅದರಂತೆ ನಿಪಿ-2 ರ ಪತ್ರ ಸಂಖ್ಯೆಯಲ್ಲಿ ಬಿ/ಪಿ ಎಂದು ನಮೂದಾಗಬೇಕಿದ್ದು, ಆದರೆ ಪಿ.564 ಎಂದು ನಮೂದಾಗಿರುತ್ತದೆ ಎಂದು ಮತ್ತು ಬಲಭಾಗದ ವಿಳಾಸದಲ್ಲಿ ಡಿವಿಷನಲ್ ಆಫೀಸ್ ಎಂದು ಇರಬೇಕಾದದ್ದು ಡಿವಿಷನಲ್ ಆಫೀಸರ್ ಎಂದು ನಮೂದಾಗಿರುತ್ತದೆ ಹಾಗೂ ಜಿ ಎಂ ಕೋಟ್ ಎಂದು ತಮ್ಮ ನೇಮಕಾತಿಯಲ್ಲಿ ಇರುವುದಿಲ್ಲ ಎಯಿ, ಆದರೆ ನಿಪಿ-2 ರಲ್ಲಿದೆ ಜೊತೆಗೆ ತಮ್ಮ ನೇಮಕಾತಿ ಪತ್ರದಲ್ಲಿ ರಿಫೋರ್ಟಿಂಗ್ ಆನ್ ಡೇಟ್ ಎಂದು ಇರುವುದಿಲ್ಲ ಅದರೊಂದಿಗೆ ಆಫೀಸ್ ಆರ್ಡರ್ ಮತ್ತು ನಂಬರ್ ನಿಪಿ-2 ರಲ್ಲಿ ಇರುವಂತೆ ಇರುವುದಿಲ್ಲ ಎಂದು, ಸಹಿ ಮಾಡುವ ಕಡೆ ಅಸ್ಟಿಸ್ಟೆಂಟ್ ಪರ್ಸನಲ್ ಆಫೀಸರ್ ಎಂದು ಇರಬೇಕಿದ್ದು, ಆದರೆ ನಿಪಿ-2 ರಲ್ಲಿ ಆಫೀಸ್ ಎಂದು ನಮೂದಿಸಲಾಗಿದೆ ಮತ್ತು ಎಡಭಾಗದಲ್ಲಿ ಸೀನಿಯರ್ ಎ ಪಿ ಓ ಬಿಲ್ಸ್ ಎಂದು ನಮೂದಿಸುವುದಿಲ್ಲ ಮತ್ತು ನಿಪಿ-2 ರಂತೆ ಕೈಯಲ್ಲಿ ಬರವಣಿಗೆ ಇರುವುದಿಲ್ಲ ಮತ್ತು ಸೀಲ್ ನಲ್ಲಿ ಬೆಂಗಳೂರು ಡಿ ಎಂದು ನಮೂದಾಗಿರುವುದಿಲ್ಲ ಎಂದು, ತಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದು ತಮ್ಮ ಸಾಕ್ಷ್ಯ ನುಡಿದಿರುತ್ತಾರೆ.

14. ಚಾಸಾ-4/ಪ್ರಾಸಾ-4 ಮಂಜನಾಂಥ ಇವರು ಮಹಜರ್ ಸಾಕ್ಷಿದಾರರಾಗಿದ್ದು, ತಮ್ಮ ಸಾಕ್ಷ್ಯದಲ್ಲಿ ಮಹಜರ್ ನಲ್ಲಿ ತನ್ನ ಸಹಿಯನ್ನು ನಿಪಿ-3 ಎ ರಂತೆ ಗುರುತಿಸಿಕೊಂಡು, ಸದರಿ ಸಹಿಯನ್ನು ಸುಮಾರು 10 ವರ್ಷಗಳ ಹಿಂದೆ ಮಂಡ್ಯದಲ್ಲಿ ಪೋಲಿಸರ ಕೋರಿಕೆಯ ಮೇರೆಗೆ ಮಾಡಿರುತ್ತೇವೆ ಎಂದು, ನಿಪಿ-1 ರಲ್ಲಿ ನಮೂದಾಗಿರುವ ವಿಚಾರ ಗೊತ್ತಿಲ್ಲ ಎಂದು, ತಮ್ಮ ಸಮಕ್ಷಮ ಪೊಲೀಸರು ಯಾವುದೇ ಸ್ವತ್ತನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದು ಮತ್ತು ಅದರಲ್ಲಿ ಏನು ನಮೂದಾಗಿದೆ ಎಂದು ತಮಗೆ ಗೊತ್ತಿಲ್ಲ ಎಂದು ಅಭಿಯೋಜನೆಗೆ ಸಂಪೂರ್ಣ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಅಭಿಯೋಜಕರು ಪ್ರಾಸಾ-4 ರವರನ್ನು ಪ್ರತಿಕೂಲ ಸಾಕ್ಷ್ಯವೆಂದು ಪರಿಗಣಿಸಿ ಸದರಿರವರನ್ನು ಪಾಟೀ ಸವಾಲಿಗೆ ಒಳಪಡಿಸಿದ್ದು, ಆದರೆ ಅವರ ಬಾಯಿಂದ ಅಭಿಯೋಜನೆಯ ಪ್ರಕರಣಕ್ಕೆ ಅನೂಕೂಲವಾಗುವ ರೀತಿಯಲ್ಲಿ ಹೇಳಿಕೆಯನ್ನು ತರಲು ವಿಫಲರಾಗಿರುತ್ತಾರೆ.

15. ಚಾಸಾ-6/ಪ್ರಾಸಾ-5 ಚೇತನ್ ಇವರು ಅಮಾನತ್ತು ಮಹಜರ್ ಸಾಕ್ಷಿದಾರರಾಗಿದ್ದು, ತಮ್ಮ ಸಾಕ್ಷ್ಯದಲ್ಲಿ ಅಮಾನತ್ತು ಮಹಜರ್ ನಲ್ಲಿ ತನ್ನ ಸಹಿಯನ್ನು ನಿಪಿ-5 ಎ ರಂತೆ ಗುರುತಿಸಿಕೊಂಡು, ಸದರಿ ಸಹಿಯನ್ನು ಮೈಸೂರಿನಲ್ಲಿ ಮೈಸೂರಿನ ರೈಲ್ವೆ ಪೊಲೀಸ್ ಠಾಣೆಯಲ್ಲಿ ಮಧ್ಯಾಹ್ನದ ವೇಳೆಯಲ್ಲಿ ಮಾಡಿರುತ್ತೇನೆ ಎಂದು, ನಿಪಿ-5 ರಲ್ಲಿ ನಮೂದಾಗಿರುವ ವಿಚಾರ ಗೊತ್ತಿಲ್ಲ ಎಂದು, ತಮ್ಮ ಸಮಕ್ಷಮ ಪೊಲೀಸರು ಯಾವುದೇ ಸ್ವತ್ತನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದು ಮತ್ತು ಅದರಲ್ಲಿ ಏನು ನಮೂದಾಗಿದೆ ಎಂದು ತಮಗೆ ಗೊತ್ತಿಲ್ಲ ಎಂದು ಅಭಿಯೋಜನೆಗೆ ಸಂಪೂರ್ಣ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಅಭಿಯೋಜಕರು ಪ್ರಾಸಾ-5 ರವರನ್ನು ಪ್ರತಿಕೂಲ ಸಾಕ್ಷ್ಯವೆಂದು ಪರಿಗಣಿಸಿ ಸದರಿರವರನ್ನು ಪಾಟೀ ಸವಾಲಿಗೆ ಒಳಪಡಿಸಿದ್ದು, ಆದರೆ ಅವರ ಬಾಯಿಂದ ಅಭಿಯೋಜನೆಯ ಪ್ರಕರಣಕ್ಕೆ ಅನೂಕೂಲವಾಗುವ ರೀತಿಯಲ್ಲಿ ಹೇಳಿಕೆಯನ್ನು ತರಲು ವಿಫಲರಾಗಿರುತ್ತಾರೆ.

16. ಚಾಸಾ-14/ಪ್ರಾಸಾ-6 ಎಸ್.ಕೃಷ್ಣಮೂರ್ತಿ, ನಿವೃತ್ತ ಪಿ.ಎಸ್.ಐ. ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕ 27-02-2015 ರಂದು ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ತಾನು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ-1 ಮತ್ತು 2 ರವರು ಠಾಣೆಗೆ ಹಾಜರಾಗಿ ನೀಡಿದ ನಿಪಿ-1 ರ ಲಿಖಿತ ದೂರನ್ನು ಸ್ವೀಕರಿಸಿಕೊಂಡು, ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ತಮ್ಮ ಮೇಲಾಧಿಕಾರಿಯವರಿಗೆ ನೀವೇದಿಸಿಕೊಂಡಿರುವುದಾಗಿ, ನಂತರ ಆರೋಪಿಯನ್ನು ಪತ್ತೆ ಮಾಡಲು ಚಾಸಾ-11 ರಿಂದ 13 ರವರನ್ನು ನೇಮಕ ಮಾಡಿರುತ್ತೇನೆ ಎಂದು, ಅದರಂತೆ ಚಾಸಾ-11 ರವರು ಆರೋಪಿ 1 ಮತ್ತು 2 ರವರನ್ನು ಪತ್ತೆ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಸದರಿಯವರು ನ್ಯಾಯಾಂಗ ಬಂಧನಕ್ಕೆ ಆದೇಶಿಸಿರುವುದಾಗಿ, ಚಾಸಾ-1 ಮತ್ತು 2 ರವರು ದೂರಿನೊಂದಿಗೆ ನಿಪಿ-2ರ ಸೃಷ್ಟಿತ ನೇಮಕಾತಿ ಆದೇಶದ ಪ್ರತಿಯನ್ನು ಹಾಜರುಪಡಿಸಿರುತ್ತಾರೆ ಎಂದು, ದಿನಾಂಕಃ16-03-2015 ರಂದು ಬೆಂಗಳೂರಿನ ರೈಲ್ವೆ ಸಿಟಿಪಿಐ ಕಚೇರಿಯಲ್ಲಿ ಮಹಜರ್ ಮಾಡಿ ಆರೋಪಿ-2 ರವರಿಂದ ಸೀಲ್ ನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದು, ದಿನಾಂಕಃ16.03.2015 ರಂದು ಆರೋಪಿ-3 ರವರಿಂದ ಬೆಂಗಳೂರು ರೈಲ್ವೆ ಕಂಟೋನ್ ಮೆಂಟ್ ನಲ್ಲಿ 500 ರೂ ಮುಖಬೆಲೆಯ 140 ನೋಟುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದು, ನಂತರ ಚಾಸಾ-15 ರವರಿಗೆ ಕಡತವನ್ನು ಮುಂದಿನ ತನಿಖೆಗಾಗಿ ಹಸ್ತಾಂತರಿಸಿರುತ್ತೇನೆ ಎಂದು ತಮ್ಮ ಸಾಕ್ಷ್ಯ ನುಡಿದಿರುತ್ತಾರೆ.

17. ಚಾಸಾ-13/ಪ್ರಾಸಾ-7 ಬಿ.ಪಿ.ರಮೇಶ್, ಪಿ.ಎಸ್.ಐ. ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ,ದಿನಾಂಕ 08-03-2015 ರಂದು ತನಗೆ ಚಾಸಾ-14 ರವರು ಆರೋಪಿ-2 ಮತ್ತು 3 ರವರನ್ನು ಪತ್ತೆ ಮಾಡಿ ಹಾಜರುಪಡಿಸುವಂತೆ ಸೂಚನೆ ನೀಡಿದ್ದರ ಮೇರೆಗೆ ಅದೇ ದಿನ ಬೆಂಗಳೂರು ರೈಲ್ವೆ ನಿಲ್ದಾಣದಲ್ಲಿ ಮಾಹಿತಿ ಪಡೆದು ಸದರಿಯವರು ರಜಾದಲ್ಲಿ ಇದ್ದು ಮನೆಯು ಕೆಂಗೇರಿಯ ರೈಲ್ವೆ ನಿಲ್ದಾಣದ ಬಳಿ ಇದೆ ಎಂದು ತಿಳಿದು ತಾನು ಸ್ಥಳಕ್ಕೆ ಬಂದು ಆರೋಪಿ 2 ರವರನ್ನು ಪತ್ತೆ ಮಾಡಿ ಚಾಸಾ-14 ರವರ ಮುಂದೆ ಹಾಜರುಪಡಿಸಿರುತ್ತೇನೆ ಎಂದು, ದಿನಾಂಕಃ15-03-2015 ರಂದು ಆರೋಪಿ-3 ರವರ ಬಗ್ಗೆ ಮಾಹಿತಿ ಪಡೆದು ಬೆಂಗಳೂರಿನ ಕಂಟ್ರೋಲ್ ರೈಲ್ವೆ ನಿಲ್ದಾಣದ ಬಳಿ ಆರೋಪಿ-3 ರವರನ್ನು ಪತ್ತೆ ಮಾಡಿ ಚಾಸಾ-14 ರವರ ಮುಂದೆ ಹಾಜರುಪಡಿಸಿರುತ್ತೇನೆ ಎಂದು ತಮ್ಮ ಸಾಕ್ಷ್ಯನುಡಿದಿರುತ್ತಾರೆ.

18. ಚಾಸಾ-8/ಪ್ರಾಸಾ-8 ಮಹಮ್ಮದ್ ಅಲಿ ಇವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ತಮ್ಮ ಸಾಕ್ಷ್ಯದಲ್ಲಿ ಆರೋಪಿ-1, 2 ಮತ್ತು 4 ರವರ ಪರಿಚಯವಿಲ್ಲವೆಂದು, ತನಗೆ ಈ ಪ್ರಕರಣದ ಬಗ್ಗೆ ಏನು ಗೊತ್ತಿಲ್ಲ ಎಂದು, ತಾನು ಈ ಬಗ್ಗೆ ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದು ಅಭಿಯೋಜನೆಗೆ ಸಂಪೂರ್ಣ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಅಭಿಯೋಜಕರು ಪ್ರಾಸಾ-8 ರವರನ್ನು ಪ್ರತಿಕೂಲ ಸಾಕ್ಷ್ಯವೆಂದು ಪರಿಗಣಿಸಿ ಸದರಿರವರನ್ನು ಪಾಟೀ ಸವಾಲಿಗೆ ಒಳಪಡಿಸಿದ್ದು, ಆದರೆ ಅವರ ಬಾಯಿಂದ ಅಭಿಯೋಜನೆಯ ಪ್ರಕರಣಕ್ಕೆ ಅನೂಕೂಲವಾಗುವ ರೀತಿಯಲ್ಲಿ ಹೇಳಿಕೆಯನ್ನು ತರಲು ವಿಫಲರಾಗಿರುತ್ತಾರೆ.

19. ಚಾಸಾ-10/ಪ್ರಾಸಾ-9 ರಜೀಯಾ ಬೇಗಂ ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿ-1 ತನ್ನ ಮಗ ಎಂದು, ಆರೋಪಿ-2 ತನಗೆ ಗೊತ್ತಿಲ್ಲ ಎಂದು, ತನಗೆ ಈ ಪ್ರಕರಣದ ಬಗ್ಗೆ ಏನು ಗೊತ್ತಿಲ್ಲ ಎಂದು, ತಾನು ಈ ಬಗ್ಗೆ ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲವೆಂದು ಅಭಿಯೋಜನೆಗೆ ಸಂಪೂರ್ಣ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಅಭಿಯೋಜಕರು ಪ್ರಾಸಾ-9 ರವರನ್ನು ಪ್ರತಿಕೂಲ ಸಾಕ್ಷ್ಯವೆಂದು ಪರಿಗಣಿಸಿ ಸದರಿರವರನ್ನು ಪಾಟೀ ಸವಾಲಿಗೆ ಒಳಪಡಿಸಿದ್ದು, ಆದರೆ ಅವರ ಬಾಯಿಂದ ಅಭಿಯೋಜನೆಯ ಪ್ರಕರಣಕ್ಕೆ ಅನೂಕೂಲವಾಗುವ ರೀತಿಯಲ್ಲಿ ಹೇಳಿಕೆಯನ್ನು ತರಲು ವಿಫಲರಾಗಿರುತ್ತಾರೆ.

20. ಚಾಸಾ-12/ಪ್ರಾಸಾ-10 ಬೀರೇಶ್, ಮುಖ್ಯ ಪೇದೆ ಮೈಸೂರು ರೈಲ್ವೆ ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕಃ 07-03-2015 ರಂದು ಚಾಸಾ-14 ರವರು ಚಾಸಾ-11 ರವರೊಂದಿಗೆ ಆಂಧ್ರದ ಇಂದೂಪುರಕ್ಕೆ ಹೋಗಿ ಆರೋಪಿ 1 ರವರನ್ನು ಪತ್ತೆ ಮಾಡಿ ಕರೆತರುವಂತೆ ಸೂಚಿಸಿರುತ್ತೇನೆ ಎಂದು, ಅದೇ ದಿನ ತಾನು ಮತ್ತು ಚಾಸಾ-11 ರವರು ಇಂದೂಪುರಕ್ಕೆ ಹೋಗಿದ್ದು, ದಿನಾಂಕಃ08-03-2015 ರ ಬೆಳಗ್ಗೆ ಆರೋಪಿ 1 ರವರನ್ನು ಕರೆತಂದು ಚಾಸಾ-14 ರವರ ಮುಂದೆ ಹಾಜರುಪಡಿಸಿರುತ್ತಾರೆ ಎಂದು ತಮ್ಮ ಸಾಕ್ಷ್ಯ ನುಡಿದಿರುತ್ತಾರೆ.

21. ಚಾಸಾ-15/ಪ್ರಾಸಾ-11 ಅಶೋಕ್ ಕುಮಾರ್, ಡಿ.ವೈ.ಎಸ್.ಪಿ.ಬೆಂಗಳೂರು., ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ, ತಾನು ದಿನಾಂಕಃ05-09-2015 ರಂದು ಚಾಸಾ-14 ರವರಿಂದ

ಕಡತವನ್ನು ಪಡೆದು ಪರಿಶೀಲಿಸಿರುತ್ತೇನೆ ಎಂದು, ಇದುವರೆಗಿನ ದಾಖಲಾತಿಗಳ ಪ್ರಕಾರ ತನಿಖೆ ಮುಕ್ತಾಯಗೊಂಡಿದ್ದು, ಆರೋಪಿತರ ವಿರುದ್ಧ ಸಾಕಷ್ಟು ದಾಖಲಾತಿಗಳು ಇದ್ದರಿಂದ ಅವರ ವಿರುದ್ಧ ಆರೋಪ ಸಾಬೀತಾದ ಕಾರಣ ಅವರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ತಮ್ಮ ಸಾಕ್ಷ್ಯ ನುಡಿದಿರುತ್ತಾರೆ.

22. ಈ ಪ್ರಕರಣದಲ್ಲಿ ಅಭಿಯೋಜನೆಯ ಪರ ದೋಷಾರೋಪಣಾ ಪತ್ರದಲ್ಲಿ ಒಟ್ಟು 15 ಜನ ಸಾಕ್ಷಿದಾರರನ್ನು ವಿಚಾರಣೆಗೊಳಪಡಿಸುವುದಾಗಿ ತೋರಿಸಿ ಅದರಲ್ಲಿ ಪ್ರಾಸಾ.1 ರಿಂದ 11 ಜನ ಸಾಕ್ಷಿದಾರರನ್ನು ವಿಚಾರಣೆಗೊಳಪಡಿಸುವ ಮೂಲಕ ನಿಪಿ-1 ರಿಂದ 9 ದಾಖಲಾತಿಗಳನ್ನು ನಿಶಾನೆಗಳನ್ನಾಗಿ ಗುರುತಿಸಿಕೊಂಡಿರುತ್ತಾರೆ. ಈ ಪ್ರಕರಣದಲ್ಲಿ ಚಾಸಾ-1 ಪಿರ್ಯಾದುದಾರರಾಗಿದ್ದು, ಪ್ರಾಸಾ-1 ರವರು ತನ್ನ ಪಾಟೀ ಸವಾಲಿನಲ್ಲಿ ಮಾಹಿತಿಯು ದಿನಾಂಕಃ18.05.2015 ರಂದು ಮಧ್ಯಾಹ್ನದ ವೇಳೆಗೆ ಬಂದಿರುತ್ತದೆ ಎಂದಿರುತ್ತಾರೆ. ಆದರೆ ವಿಚಾರಣೆಯಲ್ಲಿ ದಿನಾಂಕಃ14.02.2015 ರಂದು ಕೆಲಸ ಮಾಡುತ್ತಿದ್ದಾಗ ಮಾಹಿತಿ ಬಂದಿದೆ ಎಂದು ಹೇಳಿರುತ್ತಾರೆ ಮತ್ತು ಮದ್ದೂರು ಸ್ಟೇಷನ್ ಮಾಸ್ಟರ್ ರವರಿಂದ ಡಿವಿಷನ್ ಬ್ರಾಂಚ್ ನ ಟ್ರಾಫಿಕ್ ಇನ್ಸ್ ಪೆಕ್ಟರ್ ರವರಿಗೆ ನೇಮಕಾತಿಯ ಆದೇಶದ ಬಗ್ಗೆ ಮಾಹಿತಿಯನ್ನು ಕಳುಹಿಸಿದ್ದು, ಸದರಿ ಟ್ರಾಫಿಕ್ ಇನ್ಸಪೆಕ್ಟರ್ ಮಾಹಿತಿ ನೀಡಿರುತ್ತಾರೆ ಎಂದು ಪಾಟೀ ಸವಾಲಿನಲ್ಲಿ ಹೇಳಿದ್ದು, ಆದರೆ ಮುಖ್ಯ ವಿಚಾರಣೆಯಲ್ಲಿ ಮದ್ದೂರು ಸ್ಟೇಷನ್ ಮಾಸ್ಟರ್ ರವರಿಂದ 1 ನೇ ಆರೋಪಿಯು Points men ಆಗಿ ಕರ್ತವ್ಯಕ್ಕೆ ಹಾಜರಾಗಿರುವ ಬಗ್ಗೆ ಮಾಹಿತಿ ಬಂದಿರುತ್ತದೆ. ಆದರೆ ನಾವು ಇಂತಹ ಯಾವುದೇ ನೇಮಕಾತಿ ಮಾಡದ ಕಾರಣ ಅವರ appointment letter ನ್ನು ಕಳುಹಿಸಿಕೊಡಲು station Master ಗೆ ತಿಳಿಸಿರುತ್ತೇನೆ. ಅದರಂತೆ station Master ರವರು ತನಗೆ ನೇಮಕಾತಿ ಆದೇಶದ ನಕಲನ್ನು ಕಳುಹಿಸಿಕೊಟ್ಟರು ಎಂದು ಹೇಳಿರುವುದು ಪರಸ್ಪರ ವಿರೋಧಾತ್ಮಕವಾಗಿದೆ.

23. ಚಾಸಾ-2 station Master ರವರು ತಮ್ಮ ವಿಚಾರಣೆಯಲ್ಲಿ ತಾನು ಬೆಂಗಳೂರಿನ ಟ್ರಾಫಿಕ್ ಇನ್ಸ್‌ಪೆಕ್ಟರ್ ರವರಿಗೆ ಸದರಿ ವಿಚಾರವಾಗಿ ಜೆರಾಕ್ಸ್ ಪ್ರತಿಯನ್ನು ಕಳುಹಿಸಿದೆ ಮತ್ತು ಚಾಸಾ-1 ರವರಿಗೆ ಸದರಿ ಸೃಷ್ಟಿತ ನೇಮಕಾತಿ ವಿಚಾರವನ್ನು ತಾನು ತಿಳಿಸಿಲ್ಲ. ಚಾಸಾ-1 ರವರು

2-3 ದಿನಗಳ ನಂತರ ತನ್ನನ್ನು ಫೋನಿನಲ್ಲಿ ವಿಚಾರಿಸಿರುತ್ತಾರೆ ಎಂದು ಹೇಳಿದ್ದು ಪರಸ್ಪರ ವಿರೋಧಾತ್ಮಕವಾಗಿದೆ.

24. ಜೊತೆಗೆ ನೇಮಕಾತಿ ಪ್ರಕ್ರಿಯೆ ಬಗ್ಗೆ ಇರುವ ನಿಯಮಾವಳಿಯ ಪ್ರತಿಯನ್ನು ಹಾಜರುಪಡಿಸಿದ ಕಾರಣ ಮತ್ತು 2011 ರ ಪೂರ್ವದಲ್ಲಿ ಸದರಿ ಡಿ ಗ್ರೂಪ್ ನೌಕರರನ್ನು ನೇಮಕಾತಿ ಮಾಡಲು ಜಿ.ಎಂ.ರವರಗೆ ವಿವೇಚನಾಧಿಕಾರವಿತ್ತು ಎನ್ನಲು ಮತ್ತು ನಂತರ ಇಲ್ಲ ಎನ್ನಲು ಸದರಿ ಆದೇಶದ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ರೈಲ್ವೆ ನೇಮಕಾತಿ ನಡಾವಳಿಯ ಬಗ್ಗೆ ಹಾಗೂ ಯಾವ ಸಿಬ್ಬಂದಿಯನ್ನು ಯಾವ ಅಧಿಕಾರಿಯು ಯಾವ ನಿಯಮದಂತೆ ನೇಮಕ ಮಾಡುತ್ತಾರೆ ಎಂಬ ಯಾವುದೇ ಪೂರಕ ದಾಖಲೆಗಳ ಅನುಪಸ್ಥಿತಿಯಲ್ಲಿ ಹಾಗೂ ನಿಪಿ-2 ರ ನೇಮಕಾತಿ ಪತ್ರ ನಕಲು ಪ್ರತಿ ಎಂದು ತಜ್ಞರ ವರದಿಯ ಅನುಪಸ್ಥಿತಿಯಲ್ಲಿ ಸದರಿಯು ನಕಲು ಪ್ರತಿಯಾಗಿದೆ ಎಂದಾಗಲಿ ಅಥವಾ ಸದರಿಯನ್ನು ಆರೋಪಿಯು ಸೃಷ್ಟಿಸಿದ್ದರೆಂದಾಗಲೀ ಅಥವಾ ಅದನ್ನು ಸದರಿಯವರು ಹಾಜರುಪಡಿಸಿದ್ದಾರೆಂದಾಗಲೀ ನಂಬಲು ಯಾವುದೇ ಕಾರಣವಿಲ್ಲ. ನಿಪಿ-2 ರಲ್ಲಿ 8 ಜನರ ನೇಮಕಾತಿ ಹೆಸರು ಇದ್ದು, ಆರೋಪಿ-1 ರವರು 4 ನೇ ಸಂಖ್ಯೆಯವರಾಗಿದ್ದು, ಅವರನ್ನು ಮಾತ್ರ ಆರೋಪಿ ಮಾಡಿದ ಬಗ್ಗೆ ಚಾಸಾ-1 ಮತ್ತು 2 ರವರು ಸದರಿಯವರು ನೇಮಕಾತಿ ಪತ್ರ ಹಾಜರುಪಡಿಸಿದ್ದರಿಂದ ಮತ್ತು ಇತರರು ಬಂದಿಲ್ಲದ ಕಾರಣ ಆರೋಪಿ-1 ರವರ ವಿರುದ್ಧ ದೂರು ನೀಡಲಾಗಿದೆ ಎಂದು ಹೇಳಿದ್ದು, ಆದರೆ ಆರೋಪಿ-1 ರವರು ನಿಪಿ-2 ನ್ನು ತಂದು ಹಾಜರುಪಡಿಸಿದ ಬಗ್ಗೆ ಅವರಿಂದ ನೇಮಕಾತಿ ಆದೇಶ ಪತ್ರ ಪಡೆದ ಬಗ್ಗೆ ಹಾಗೂ ಅವರಿಗೆ ತರಭೇತಿಗೆ ಹಾಜರಾಗಲು ನೀಡಿದ ಮೆಮೋದ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸದೆ ಕೇವಲ ಆರೋಪಿಯ ಹೆಸರು ನಿಪಿ-2 ರಲ್ಲಿ ಇದೆ ಎಂಬ ಏಕಮಾತ್ರ ಕಾರಣದಿಂದ ಆರೋ-1 ರವರು ನಿಪಿ-2 ನ್ನು ಸೃಷ್ಟಿಸಿ ಹಾಜರುಪಡಿಸಿದ್ದಾರೆ ಎಂದು ನಂಬಲು ಸಾಧ್ಯವಿಲ್ಲ.

25. ಜೊತೆಗೆ ಆರೋಪಿ-2 ರಿಂದ 4 ರವರ ವಿರುದ್ಧ ಯಾವುದೇ ಸಾಕ್ಷಿದಾರರು ಸೀಲನ್ನು ಆರೋಪಿತರವರು ಸೃಷ್ಟಿಸಿದ ಬಗ್ಗೆ ಅಥವಾ ಆರೋಪಿ-2 ರವರು 5 ಲಕ್ಷ ಲಂಚ ಪಡೆದ ಬಗ್ಗೆ ಯಾವುದೇ ಹೇಳಿಕೆ ನೀಡಿಲ್ಲದ ಕಾರಣ ಸದರಿಯವರ ವಿರುದ್ಧ ಯಾವುದೇ ಆರೋಪವು

ಸಾಬೀತಾಗಿರುವುದಿಲ್ಲ. ಉಳಿದಂತೆ ಆರೋಪಿ-2 ರವರಿಗೆ ಸಂಬಂಧಿಸಿದಂತೆ ಆರೋಪಿ-1 ರವರು ನೇಮಕಾತಿ ಆದೇಶ ಪ್ರತಿ ಹಾಜರುಪಡಿಸಿದ್ದರು ಎಂಬ ಬಗ್ಗೆ ಯಾವುದೇ ಇಲಾಖೆ ಅಧಿಕಾರಿಯನ್ನ ಹೊರತುಪಡಿಸಿ ಯಾವುದೇ ಪ್ರತ್ಯಕ್ಷ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ. ಜೊತೆಗೆ ಚಾಸಾ-2 ರವರು incharge station master ಆದ ಮಣಿಯಯ್ಯರವರಿಗೆ ತಿಳಿಸಿದ್ದೆ ಎಂದು ಸದರಿಯವರು ನಂತರ ಆರೋಪಿಯು ತರಭೇತಿಗೆ ಹೋಗಿಲ್ಲವೆಂದು ತಿಳಿಸಿದ್ದರೆಂದು ಹೇಳಿದ್ದು, ಆದರೆ ಸದರಿ ವ್ಯಕ್ತಿಯನ್ನು ಸಾಕ್ಷಿದಾರರಾಗಿ ವಿಚಾರಣೆ ಮಾಡಿಲ್ಲ ಮತ್ತು ಸಾಕ್ಷಿದಾರರ ಪಟ್ಟಿಯಲ್ಲಿ ಕೂಡ ಸೇರಿಸಿಲ್ಲ. ಸದರಿಯು ಅಭಿಯೋಜನೆಯ ವಿಫಲತೆಗೆ ಕಾರಣವಾಗಿದೆ. ಜೊತೆಗೆ ಫ್ರಾಸಾ-3 ರವರು ಚೀಫ್ ಆಫೀಸರ್ ಸೂಪರ್ ಡೆಂಟ್ ಆಫ್ ರೈಲ್ವೆ ಎಂದು ಸಾಕ್ಷಿ ವಿಚಾರಣೆಗೆ ನೀಡಿದ್ದು, ಸದರಿಯವರು ಆರೋಪಿತರ ಬಗ್ಗೆ ಪ್ರತ್ಯಕ್ಷದರ್ಶಿಯೂ ಅಲ್ಲ, ಅಥವಾ ದೂರುದಾರರು ಅಥವಾ ಮಹಜರ್ ದಾರರು ಆಗಿರುವುದಿಲ್ಲ. ಕೇವಲ ನೇಮಕಾತಿಯ ಪತ್ರ ಕಳುಹಿಸುವ ಕೆಲಸ ಮಾಡುತ್ತಾರೆ ಎಂಬ ಮಾತ್ರಕ್ಕೆ ಸಾಕ್ಷಿ ಮಾಡಿದ್ದು, ಅವರಿಂದ ಅಭಿಯೋಜನೆಗೆ ಯಾವುದೇ ರೀತಿಯ ಉಪಯೋಗ ಆಗಿಲ್ಲ. ಸದರಿಯವರು ನೇಮಕಾತಿ ಪತ್ರದ ನಮೂನೆಯ ಬಗ್ಗೆ ಹೇಳಿ, ಆದರೇ ನಿಪಿ-2 ಸದರಿ ನಮೂನೆಯಲ್ಲವೆಂದು ಹೇಳಿರುತ್ತಾರೆ. ಆದರೆ ಆ ಬಗ್ಗೆ ಮಾದರಿ ನೇಮಕಾತಿ ನಮೂನೆಯನ್ನು ಹಾಜರುಪಡಿಸಿಲ್ಲ. ಜೊತೆಗೆ ಸದರಿಯವರು ನೇಮಕಾತಿ ಪತ್ರವನ್ನು ನೋಡಿ ಸೃಷ್ಟಿತ ಅಥವಾ ಇಲ್ಲವೇ ಎಂದು ಹೇಳುವ ತಜ್ಞರಾಗಿದ್ದಾರೆಯೇ ಎಂಬ ಬಗ್ಗೆ ಕೂಡ ಯಾವುದೇ ವಿಚಾರಣೆ ಅಥವಾ ದಾಖಲಾತಿ ನೀಡಿಲ್ಲ. ಆದ್ದರಿಂದ ಸದರಿಯವರ ಸಾಕ್ಷ್ಯವು ನಿರುಪಯುಕ್ತವಾಗಿದೆ.

26. ಮುಂದುವರೆದು ಚಾಸಾ-1 ರವರು ದೂರು ದಾಖಲಿಸಲು ತನ್ನ ಮೇಲಾಧಿಕಾರಿಯು ತನಗೆ ಹೇಳಿದ್ದರು, ಸದರಿ ದೂರನ್ನು ಅದೇ ದಿನ ನೀಡಿರುತ್ತೇನೆ ಎಂದು ಹೇಳಿದ್ದು, ಆದರೆ ದೂರು ದಾಖಲಿಸಲು ಯಾವ ಠಾಣೆ ಎಂದು ವಿಚಾರಣೆ ಮಾಡಿ ನಂತರ, ದೂರು ದಾಖಲಿಸಿರುವುದಾಗಿ ಹೇಳಿರುವುದು ಕೂಡ ಪರಸ್ಪರ ವಿರೋಧಾತ್ಮಕವಾಗಿದೆ. ಜೊತೆಗೆ ದೂರು ದಾಖಲಿಸಿರುವುದಾಗಿ ಹೇಳಿರುವುದು ಕೂಡ ಪರಸ್ಪರ ವಿರೋಧಾತ್ಮಕವಾಗಿದೆ. ಜೊತೆಗೆ ದೂರು ದಾಖಲಿಸಲು ಮೇಲಾಧಿಕಾರಿ ಹೇಳಿದ್ದು, ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ದೂರನ್ನು ತಯಾರಿಸಿದ್ದೇನೆ ಎಂದು ಹೇಳಿದ್ದು, ಆದರಿ ಸದರಿ ದೂರನ್ನು ದಾಖಲಿಸಲು ತನಗೆ ಮೇಲಾಧಿಕಾರಿಯಿಂದ ಯಾವುದೇ ಆದೇಶ ಇಲ್ಲ. ದೂರು ದಾಖಲಿಸಲು ಸಕ್ಷಮ ಅಧಿಕಾರಿಯಾಗಿದ್ದೇನೆ ಎಂದು

ಹೇಳಿರುವುದು ಹಾಗೂ ಜಂಟಿಯಾಗಿ ದೂರು ನೀಡಲು ಯಾರು ಹೇಳಿದ್ದರು ಎಂದರೆ ಸಾಕ್ಷಿಯೂ ತನ್ನ ಮೇಲಾಧಿಕಾರಿಗಳು ಹೇಳಿದ್ದು ಪರಸ್ಪರ ವಿರೋದದಿಂದ ಕೂಡಿದೆ.

27. ಉಳಿದಂತೆ ಫ್ರಾಸಾ-4 ಮತ್ತು ಫ್ರಾಸಾ-5 ರವರು ನಿಪಿ-3 ಮತ್ತು 5 ರ ಮಹಜರ್ ಸಾಕ್ಷಿದಾರರಾಗಿದ್ದು, ಸಂಪೂರ್ಣ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಆದ್ದರಿಂದ ಎಂ.ಓ-1 ಸೀಲ್ ಮತ್ತು ಎಂ.ಓ-2 ಹಣವನ್ನು ಅಮಾನತ್ತುಪಡಿಸಿದ ಬಗ್ಗೆಯೇ ಅನುಮಾನ ಮೂಡುತ್ತದೆ.

28. ಚಾಸಾ-6 ರವರು ದೂರಿನೊಂದಿಗೆ ನಿಪಿ-2 ನ್ನು ಸ್ವೀಕರಿಸಿ ಅಮಾನತ್ತು ಮಾಡಿದ ಬಗ್ಗೆ ಮಹಜರ್ ಮಾಡಿಲ್ಲ ಮತ್ತು ಆರೋಪಿಯ ವಿರುದ್ಧ ದೂರು ದಾಖಲಿಸಲು ಆರೋಪಿಯು ನಿಪಿ-2 ನ್ನು ನೀಡಿದ ಎಂದು ಮೇಲ್ನೋಟದಲ್ಲಿ ಪರಿಗಣಿಸಲು ಆತನಿಗೆ ನೇಮಕಾತಿ ಮೆಮೋ ನೀಡಿದ ಬಗ್ಗೆ ದಾಖಲಾತಿ ಸ್ವೀಕರಿಸಿಲ್ಲ ಎಂದು ಒಪ್ಪಿದ್ದಾರೆ. ಜೊತೆಗೆ ಚಾಸಾ-2 ರವರು ಕೂಡ ಮೆಮೋ ನೀಡಿದ್ದಾಗಿ ನುಡಿದಿದ್ದು, ಸದರಿ ಮೆಮೋದ ಹಿಂಬರಹದ ಕೂಡ ನೀಡಿಲ್ಲ. ಚಾಸಾ-7 ರವರು ಆರೋಪಿ-2 ಮತ್ತು 3 ರವರನ್ನು ಪತ್ತೆ ಮಾಡಿದ ಬಗ್ಗೆ ಸಾಕ್ಷಿ ನುಡಿದಿದ್ದು, ಆದರೆ ಸದರಿಯವರನ್ನು ಏಕೆ ಬಂಧಿಸಲು ಆದೇಶಿಸಿದ್ದರು ಎಂದು ಸಾಕ್ಷಿ ನುಡಿಯದ ಕಾರಣ ಸದರಿಯವರ ಸಾಕ್ಷ್ಯವು ನಿರುಪಯುಕ್ತವಾಗಿದೆ.

29. ಉಳಿದಂತೆ ಫ್ರಾಸಾ-8 ಮತ್ತು 9 ರವರು ಮಹಜರ್ ಸಾಕ್ಷಿದಾರರಾಗಿದ್ದು ಮತ್ತು ಹೇಳಿಕೆ ನೀಡಿದ್ದಾಗಿ ವಿಚಾರಣೆ ಮಾಡಿದ್ದು, ಆದರೆ ಸದರಿಯವರು ಸಂಪೂರ್ಣ ಪ್ರತಿಕೂಲ ಸಾಕ್ಷಿದಾರರಾಗಿರುತ್ತಾರೆ. ಫ್ರಾಸಾ-10 ಮತ್ತು 11 ರವರು ತನಿಖಾಧಿಕಾರಿಯಾಗಿದ್ದು, ಆದರೆ ಪೂರಕ ಸಾಕ್ಷಿದಾರರ ಕೊರತೆಯಿಂದ ಸದರಿಯವರ ಸಾಕ್ಷ್ಯವು ಅಭಿಯೋಜನೆಗೆ ಸಹಾಯಕವಾಗಿರುವುದಿಲ್ಲ.

30. ಒಟ್ಟಾರೆಯಾಗಿ ಅಭಿಯೋಜನೆಯ ಸಾಕ್ಷ್ಯವು ಆರೋಪಿಗಳ ಆರೋಪವನ್ನು ಸಾಬೀತುಪಡಿಸಲು ವಿಫಲರಾಗಿದ್ದು, ತನಿಖಾಧಿಕಾರಿಯ ಅಪೂರ್ಣ ತನಿಖೆಯು ಅಭಿಯೋಜನೆಯ ವಿಫಲತೆಗೆ ಕಾರಣವಾಗಿದೆ ಮತ್ತು ಸದರಿ ಅಪೂರ್ಣ ತನಿಖೆಯಿಂದ ಉಂಟಾದ ಸಂಶಯದ ಲಾಭವು ಆರೋಪಿಗಳಿಗೆ ದೊರೆತ್ತಿದ್ದು, ಅಭಿಯೋಜನೆಯು

ಸಂಶಯಾತೀತವಾಗಿ ಸಾಬೀತುಪಡಿಸಲು ವಿಫಲವಾಗಿದೆ. ಆದ್ದರಿಂದ, ಅಂಶ ಸಂಖ್ಯೆ-1 ರಿಂದ 4 ನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.

31. ಅಂಶ-**5:-** ಮೇಲ್ಕಂಡ ಅಂಶ 1 ರಿಂದ 4 ರಲ್ಲಿ ಚರ್ಚಿಸಲಾದ ಕಾರಣಗಳಿಂದಾಗಿ ಅಂಶ 5 ಕ್ಕೆ ಈ ಕೆಳಕಂಡಂತೆ ಮಾಡುವ ಆದೇಶ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1) ರಡಿಯಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಆರೋಪಿತರ ವಿರುದ್ಧ ಭಾರತ ದಂತ ಸಂಹಿತೆ ಕಲಂ.420, 468, 471 ಮತ್ತು 465 ಸಹವಾಚಕ 34 ರಡಿಯಲ್ಲಿ ಆಪಾದನೆ ಸಾಬೀತಾಗದೇ ಇರುವುದರಿಂದ ಆರೋಪಿರನ್ನು ನಿರ್ದೋಷಿಗಳ ಎಂದು ಪರಿಗಣಿಸಿ ಬಿಡುಗಡೆಗೊಳಿಸಲು ಆದೇಶಿಸಿದೆ.

ಆರೋಪಿತರ ಪರ ಜಾರಿಗೊಳಿಸಿರುವ ಬಂಧ ಪತ್ರವನ್ನು ಹಾಗೂ ಸದರಿಯವರ ಪರ ಜಾಮೀನುದಾರರು ಜಾರಿಗೊಳಿಸಿರುವ ಜಾಮೀನು ಮುಚ್ಚಳಿಗೆ ಪತ್ರವನ್ನು ಸಹ ಈ ಮೂಲಕ ರದ್ದುಗೊಳಿಸಿದೆ.

ಈ ಪ್ರಕರಣದಲ್ಲಿ ಪಿ.ಎಫ್. ನಂ.6/2015 ರಡಿ ದಿನಾಂಕ 22.03.2015 ರಂದು ಅಮಾನತ್ತು ಪಡಿಸಿಕೊಂಡಿರುವ ಮುದ್ದೆಮಾಲು-1 ಸೀಲನ್ನು ಬೆಲೆ ಬಾಳದ ಅನುಪಯುಕ್ತ ವಸ್ತುವಾದ್ದರಿಂದ ಮೇಲ್ಮನವಿಯ ಅವಧಿ ಮುಗಿದ ನಂತರ ಅದನ್ನು ನಾಶಪಡಿಸಲು ಆದೇಶಿಸಲಾಗಿದೆ.

ಈ ಪ್ರಕರಣದಲ್ಲಿ ಪಿ.ಎಫ್. ನಂ.6/2015 ರಡಿ ದಿನಾಂಕ 22.03.2015 ರಂದು ಅಮಾನತ್ತು ಪಡಿಸಿಕೊಂಡಿರುವ ಮುದ್ದೆಮಾಲು-2 ಹಣವನ್ನು ಬೆಲೆ ಬಾಳುವ ಉಪಯುಕ್ತ

ವಸ್ತುವಾದ್ದರಿಂದ ಮೇಲ್ಮನವಿಯ ಅವಧಿ ಮುಗಿದ ನಂತರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಆದೇಶಿಸಿಲಾಗಿದೆ.

*(ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ನೀಡಿ, ಅವರು ಬೆರಳಚ್ಚು ಮಾಡಿದ ನಂತರ ಅದನ್ನು ಪರಿಷ್ಕರಿಸಿ, ತಿದ್ದುಪಡಿ ಮಾಡಿ ಈ ದಿವಸ ಅಂದರೆ ದಿನಾಂಕ 2ನೇ ಏಪ್ರಿಲ್ 2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.)*

**( ನಳಿನ ಎಸ್.ಸಿ.)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಮದ್ದೂರು.

## ಅನುಬಂಧ

**1. ಅಭಿಯೋಜನಾ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ.**

ಫ್ರಾಸಾ-1 - ಸೋಮಶೇಖರ.
ಫ್ರಾಸಾ-2 - ಬಾಬು.
ಫ್ರಾಸಾ-3 - ಅರ್ಚನಾ ಪ್ರಸಾದ್.
ಫ್ರಾಸಾ-4 - ಮಂಜುನಾಥ.
ಫ್ರಾಸಾ-5 - ಚೇತನ್.
ಫ್ರಾಸಾ-6 - ಕೆ.ಕೃಷ್ಣಮೂರ್ತಿ.
ಫ್ರಾಸಾ-7 - ಬಿ.ಪಿ.ರಮೇಶ.
ಫ್ರಾಸಾ-8 - ಮಹಮ್ಮದ್ ಅಲಿ.
ಫ್ರಾಸಾ-9 - ರಜಿಯಾ ಬೇಗಂ.
ಫ್ರಾಸಾ-10 - ಬೀರೇಶ್.
ಫ್ರಾಸಾ-11 - ಅಶೋಕ್ ಕುಮಾರ್.

**2. ಅಭಿಯೋಜನೆಯ ಪರ ಗುರುತಿಸಲ್ಪಟ್ಟ ದಾಖಲೆಗಳ ವಿವರ :**

ನಿಪಿ-1 - ದೂರು
ನಿಪಿ-1(ಎ) - ಫ್ರಾಸಾ-1 ರವರ ಸಹಿ.
ನಿಪಿ-1(ಬಿ) - ಫ್ರಾಸಾ-2 ರವರ ಸಹಿ.
ನಿಪಿ-2 - ನೇಮಕಾತಿ ಆದೇಶ ಪ್ರತಿ
ನಿಪಿ-2(ಎ) - ಫ್ರಾಸಾ-6 ರವರ ಸಹಿ.
ನಿಪಿ-3 - ಮಹಜರ್.

| | | |
|---|---|---|
| ನಿಪಿ-3(ಎ) | - | ಫ್ರಾಸಾ-4 ರವರ ಸಹಿ. |
| ನಿಪಿ-3(ಬಿ) | - | ಫ್ರಾಸಾ-6 ರವರ ಸಹಿ. |
| ನಿಪಿ-4 | - | ಫ್ರಾಸಾ-4 ರವರ ಹೇಳಿಕೆ. |
| ನಿಪಿ-5 | - | ಅಮಾನತ್ತು ಮಹಜರ್. |
| ನಿಪಿ-5(ಎ) | - | ಫ್ರಾಸಾ-5 ರವರ ಸಹಿ. |
| ನಿಪಿ-5(ಬಿ) | - | ಫ್ರಾಸಾ-4 ರವರ ಸಹಿ. |
| ನಿಪಿ-6 | - | ಫ್ರಾಸಾ-5 ರವರ ಹೇಳಿಕೆ. |
| ನಿಪಿ-7 | - | ಪ್ರಥಮ ವರ್ತಮಾನ ವರದಿ |
| ನಿಪಿ-7(ಎ) | - | ಫ್ರಾಸಾ-6 ರವರ ಸಹಿ. |
| ನಿಪಿ-8 | - | ಫ್ರಾಸಾ-8 ರವರ ಹೇಳಿಕೆ. |
| ನಿಪಿ-9 | - | ಫ್ರಾಸಾ-9 ರವರ ಹೇಳಿಕೆ. |

**3. ಗುರುತಿಸಲಾದ ಮುದ್ದೆ ಮಾಲು:-**

-ಇಲ್ಲಾ-

**4. ಆರೋಪಿಗಳ ಪರವಾಗಿ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ:-** - ಇಲ್ಲ -

**5. ಆರೋಪಿಗಳ ಪರವಾಗಿ ಗುರುತಿಸಲಾದ ದಾಖಲೆಗಳ ಪಟ್ಟಿ:-** - ಇಲ್ಲ -

| | | |
|---|---|---|
| ಮುದ್ದೆಮಾಲು-1 | - | ಸೀಲು. |
| ಮುದ್ದೆಮಾಲು-2 | - | ಹಣ. |

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಮದ್ದೂರು.